# ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ಯಮ)**

ವಿಶ್ವೇಶ್ವರಯ್ಯಕೇಂದ್ರ, 12ನೇ ಮಹಡಿ, ಮುಖ್ಯಗೋಪುರ, ಡಾ.ಬಿ.ಅರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.

ಕಅಅನಿ/ಕ್ರಿಯಾ ಯೋಜನೆ/2022–23 ದಿನಾಂಕ 02/06/2022

**ಗೆ**

ಜಿಲ್ಲಾ ವ್ಯವಸ್ಥಾಪಕರು,
ಕರ್ನಾಟಕಅಲ್ಪಸಂಖ್ಯಾತರಅಭಿವೃದ್ಧಿ ನಿಗಮ ನಿಯಮಿತ,
ಎಲ್ಲಾ ಜಿಲ್ಲೆಗಳಿಗೆ.

*ವಿಷಯ: 2022–23ನೇ ಸಾಲಿನ ನಿಗಮದ ಯೋಜನೆಗಳ ಭೌತಿಕ ಮತ್ತು ಆರ್ಥಿಕ ಗುರಿಯ ಕ್ರಿಯಾ ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.*

ಉಲ್ಲೇಖ:1) ಸರ್ಕಾರಿ ಆದೇಶ ಸಂಖ್ಯೆ ಎಂಡಬ್ಲ್ಯೂಡಿ 36 ಎಂಡಿಸಿ 2022, ದಿನಾಂಕ 26.04.2022.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2022–23ನೇ ಸಾಲಿನ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕ್ರಿಯಾ ಯೋಜನೆಗೆ ಸರ್ಕಾರದಿಂದ ಉಲ್ಲೇಖ1 ರಂತೆ ರೂ.60.00 ಕೋಟಿಗೆ ಅನುಮೋದನೆ ದೊರೆಕಿರುತ್ತದೆ. ಸದರಿ ಅನುದಾನಕ್ಕೆ ಅನುಗುಣವಾಗಿ ನಿಗಮದಿಂದ ಈ ಕೆಳಕಂಡ ಯೋಜನೆಗಳನ್ನು ಕಾರ್ಯಗತ ಗೊಳಿಸಬೇಕಾಗಿರುತ್ತದೆ.

1. 'ಅರಿವು' (ವಿದ್ಯಾಭ್ಯಾಸ ಸಾಲ) ಸಾಲ ಯೋಜನೆ
2. ಟ್ಯಾಕ್ಸಿ/ಗೂಡ್ಸ್/ ಪ್ಯಾಸೆಂಜರ್ ಆಟೋರಿಕ್ಷ ವಾಹನ ಖರೀದಿಸಲು ಸಹಾಯಧನ ಯೋಜನೆ
3. 'ಶ್ರಮಶಕ್ತಿ' ಯೋಜನೆ
4. ಸ್ವಯಂ ಉದ್ಯೋಗ ಯೋಜನೆ

ನಿಗಮದ ಯೋಜನೆಗಳ ಭೌತಿಕ ಹಾಗೂ ಆರ್ಥಿಕ ಗುರಿಯನ್ನು 2011ರ ಜನಗಣತಿಯ ಅಲ್ಪಸಂಖ್ಯಾತರ ಜನ ಸಂಖ್ಯೆ ಆಧಾರಧ ಮೇಲೆ ಜಿಲ್ಲಾವಾರು ನಿಗದಿಪಡಿಸಿ ಈ ಪತ್ರದ ಜೊತೆ ತಖ್ತೆ ಲಗತ್ತಿಸಲಾಗಿದೆ. ನಿಗಮದ ಎಲ್ಲಾ ಯೋಜನೆಗಳಿಗೆ ನೀಡಿರುವ ಗುರಿಗೆ ಅನುಗುಣವಾಗಿ ಜಿಲ್ಲಾ ವ್ಯವಸ್ಥಾಪಕರು ಸ್ಥಳಿಯ ಪ್ರಮುಖ ದಿನ ಪತ್ರಿಕೆಗಳಲ್ಲಿ/ಮಸೀದಿ/ ಚರ್ಚ್/ಹಾಗೂ ಇತರೆ ಪ್ರಾರ್ಥನ ಸ್ಥಳಗಳಲ್ಲಿ, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ

ಅಧೀನದಲ್ಲಿ ಬರುವ ತಾಲ್ಲೂಕುವಾರು ಮಾಹಿತಿ ಕೇಂದ್ರಗಳಲ್ಲಿ ಪ್ರಚಾರಪಡಿಸಿ ಅರ್ಜಿಗಳನ್ನು ಅಹ್ವಾನಿಸಲು 15ನೇ ಜುಲೈ'2022 ಕೊನೆ ದಿನಾಂಕವನ್ನು ನಿಗಧಿಪಡಿಸಲಾಗಿದೆ ಹಾಗೂ ಈ ಕೆಳಗಿನಂತೆ ಕ್ರಮ ತೆಗೆದು ಕೊಳ್ಳಲು ಸೂಚಿಸಲಾಗಿದೆ.

ಮೇಲಿನ ಯೋಜನೆಗಳಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಮಾನದಂಡ ಈ ಕೆಳಕಂಡಂತಿವೆ:

1. ನಿಗಮದ ಎಲ್ಲಾ ಯೋಜನೆಗಳಲ್ಲಿ 80:10:10 ಅನುಪಾತದಲ್ಲಿ ಅಂದರೆ ಶೇಕಡ 80 ರಷ್ಟು ಮುಸ್ಲಿಂ ಶೇಕಡ 10 ರಷ್ಟು ಕ್ರೈಸ್ತರು ಹಾಗೂ ಶೇಕಡ 10 ರಷ್ಟು ಇತರೆ (ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ) ಜನಾಂಗದವರುಗಳಿಗೆ ಸೌಲಭ್ಯವನ್ನು ಒದಗಿಸುವ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.
2. ನಿಗಮದ ಎಲ್ಲಾಯೋಜನೆಗಳಲ್ಲಿ ಮಹಿಳೆಯರಿಗೆ ಕನಿಷ್ಠ ಶೇಕಡ 33 ರಷ್ಟು ಆದ್ಯತೆ ಒದಗಿಸುವುದು.
3. ಎಲ್ಲಾ ಯೋಜನೆಗಳಲ್ಲಿ ಅಂಗವಿಕಲರಿಗೆ ಹಾಗೂ ಮಾಜಿ ಸೈನಿಕರಿಗೆ ಶೇಕಡ 5 ರಷ್ಟು ಗುರಿಯನ್ನು ಆದ್ಯತೆ ಒದಗಿಸುವುದು.
4. ಆರ್ಥಿಕ ನೆರವು ಪಡೆಯಲಿಚ್ಛಿಸುವ ಅರ್ಜಿದಾರರು ಸರ್ಕಾರವು ಅಂಗೀಕರಿಸಿದ ಅಲ್ಪಸಂಖ್ಯಾತ ವರ್ಗಗಳ ಪ್ರವರ್ಗ-1, ಪ್ರವರ್ಗ-02ಎ, 2ಬಿ, 3ಎ ಮತ್ತು 3ಬಿ ಗುಂಪಿಗೆ ಸೇರಿದವರಾಗಿರಬೇಕು. (ಸರ್ಕಾರಿ ಆದೇಶ ಸಂಖ್ಯೆ. SWD /225 /BCA /2000 ದಿನಾಂಕ 30.03.2002)
5. ಅರ್ಜಿದಾರರ ವಯಸ್ಸು, ಆದಾಯದ ಮಿತಿ, ಯೋಜನೆಗಳ ಸಾಲ/ಸಹಾಯಧನ ಮತ್ತು ಸಾಲದ ಮರುಪಾವತಿ, ಸಾಲದ ಮೇಲಿನ ಬಡ್ಡಿ ದರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಯೋಜನೆ | ಸಾಲ ರೂ. | ಸಹಾಯಧನ ರೂ. | ವಯಸ್ಸು ರೂ. | ಆದಾಯದ ಮಿತಿ | ಸಾಲದ ಮರುಪಾವತಿ | | ಶೇ. ಬಡ್ಡಿ ದರ |
|---|---|---|---|---|---|---|---|---|
| 1 | ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ | ಎಂ.ಬಿ.ಬಿ.ಎಸ್,ಎಂ.ಡಿ/ಎಂ.ಎಸ್, ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭೋದನ ಶುಲ್ಕ ಮಾತ್ರ ಗರಿಷ್ಟ ರೂ.3.00 ಲಕ್ಷ ಬಿ.ಡಿ.ಎಸ್. ಎಂ.ಡಿ.ಎಸ್ ಕೋರ್ಸ್‌ಗಳಿಗೆ ಭೋದನ ಶುಲ್ಕ ಗರಿಷ್ಟ ರೂ.1.00 ಲಕ್ಷ, ಎಂಡಿ ಆಯುಷ್.(AYUSH) ಭೋದನ ಶುಲ್ಕ ಗರಿಷ್ಟ ರೂ.50,000/- ಬ್ಯಾಚುಲಾರ್ ಆಫ್ ಆರ್ಕಿಟೆಕ್ಟ/ ಇಂಜಿನಿಯರಿಂಗ್/ಟೆಕ್ನಾಲಜಿ (ಬಿ.ಇ./ಬಿ.ಟೆಕ್), ಬಿ.ಆರ್ಕ್, ಎಂ.ಟೆಕ್, ಎಂ.ಇ. ಎಂ.ಆರ್ಕ್, ಮತ್ತು MBA,MCA,LLB, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಭೋದನ ಶುಲ್ಕ ಮಾತ್ರ ಗರಿಷ್ಠ ರೂ.50,000/-ಗಳು | - | | ರೂ.8,00,000/- ಮೀರಿರಬಾರದು | 3-5 ವರ್ಷಗಳು | 36-60 | 2% |
| 2 | ಟ್ಯಾಕ್ಸಿ/ಗೂಡ್ಸ್/ಪ್ಯಾಸೆಂಜರ್ ಆಟೋ ರಿಕ್ಷ/ವಾಹನ ಖರೀದಿಸಲು ಸಹಾಯಧನ ಯೋಜನೆ | | ಬ್ಯಾಂಕುಗಳಿಂದ ಸಾಲ ಮಂಜೂರಾತಿ ನೀಡಿದ/ಪಡೆದ ಫಲಾನುಭವಿಗಳಿಗೆ ಆಟೋರಿಕ್ಷ / ಗೂಡ್ಸ್ ವಾಹನ /ಟ್ಯಾಕ್ಸಿ ಖರೀದಿಸಲು ವಾಹನದ ಮೌಲ್ಯದ ಶೇ.33 ರಷ್ಟು ಸಹಾಯಧನ ಗರಿಷ್ಠ ರೂ.2.50 ಲಕ್ಷವನ್ನು ನೀಡಲಾಗುವುದು. | 18-55 | ರೂ.4,50,000/- ಮೀರಿರಬಾರದು | - | - | - |

| | | | | | | | | |
|---|---|---|---|---|---|---|---|---|
| 3 | ಶ್ರಮಶಕ್ತಿ ಯೋಜನೆ | 25,000/- | 25,000/- | 18-55 | **ರೂ.3,50,000/- ಮೀರಿರ ಬಾರದು** | 3 ವರ್ಷ | 36 | 4% |
| 4 | ಸ್ವಯಂ ಉದ್ಯೋಗ ಯೋಜನೆ | - | ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. ಘಟಕ ವೆಚ್ಚದ ಶೇ.33 ಅಥವಾ ಗರಿಷ್ಟ ಮಿತಿ ರೂ.1.00 ಲಕ್ಷದ ಸಹಾಯಧನ ನಿಗಮದಿಂದ ನೀಡಲಾಗುವುದು. | 18-55 | **ರೂ.1,03,000/- (ನಗರ ಪ್ರದೇಶ) ಮತ್ತು ರೂ.81,000/- (ಗ್ರಾಮೀಣ ಪ್ರದೇಶ) ಮೀರಿರಬಾರದು** | - | - | - |

ಅರ್ಜಿದಾರರ ತಮ್ಮ ವಿಳಾಸದ ದೃಢೀಕರಣಕ್ಕಾಗಿ ಆಧಾರ್ (UID) ಪ್ರತಿಯನ್ನು ಲಗತ್ತಿಸಿ, ಅದನ್ನು ಅವರ ಬ್ಯಾಂಕ್ ಖಾತೆಗೆ ಜೋಡನೆ (ಲಿಂಕ್) ಮಾಡಿರಬೇಕು ಮತ್ತು ಇತರೆ ಮಾನ್ಯವಾಗಿರುವ ದಾಖಲಾತಿಗಳು ಪಡೆಯಲು ಸೂಚಿಸಲಾಗಿದೆ.

**<u>2022-23ನೇ 'ಅರಿವು' (ವಿದ್ಯಾಭ್ಯಾಸ ಸಾಲ) ಯೋಜನೆ</u>**

ಈ ಯೋಜನೆಯಡಿಯಲ್ಲಿ ವೃತ್ತಿಪರ ಶಿಕ್ಷಣ ಅಂದರೆ MBBS,MD,MS,B.E,B.Tech, M.E, M.Tech, BDS, MDS, B.Ayush, M.Ayush, MBA,MCA,LLB, B.Arch, M.Arch ಕೋರ್ಸ್ ಮಾಡಬಯಸುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅವರು ವ್ಯಾಸಂಗ ಪೂರ್ಣಗೊಳಿಸುವವರಿಗೆ ಪ್ರತಿ ವರ್ಷಕ್ಕೆ ರೂ.50,000/- ದಿಂದ ರೂ.3,00,000/-ವರೆಗೆ ಸಾಲವನ್ನು ಮಂಜೂರು ಮಾಡಲಾಗುತ್ತದೆ. ವ್ಯಾಸಂಗ ಪೂರ್ಣಗೊಳಿಸಿದ 6 ತಿಂಗಳ ನಂತರ ಅಂತಹ ವಿದ್ಯಾರ್ಥಿಯು ಶೇ2ರ ಸೇವಾಶುಲ್ಕದೊಂದಿಗೆ ಸಾಲವನ್ನು ಮರುಪಾವತಿ ಮಾಡಬೇಕಾಗುತ್ತದೆ. ಈ ಯೋಜನೆಯಡಿ ಕುಟುಂಬದ ವಾರ್ಷಿಕ ಆದಾಯ ಮಿತಿ ರೂ.8.00ಲಕ್ಷಗಳು ಮೀರಿರಬಾರದು.

**ಮಾರ್ಗಸೂಚಿಗಳು**

1.ವಿದ್ಯಾಬ್ಯಾಸ ಸಾಲವನ್ನು ಪಡೆಯ ಬಯಸುವ ವಿದ್ಯಾರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಸಾಫ್ಟ್‌ವೇರ್ ಮೂಲಕ ಸಲ್ಲಿಸಬೇಕು.

2.ಆಯಾ ಜಿಲ್ಲಾ ಕಛೇರಿಗಳಲ್ಲಿ ಆನ್‌ಲೈನ್‌ನಲ್ಲಿ ನವೀಕರಣ ಅರ್ಜಿಗಳನ್ನು ಸಲ್ಲಿಸುವಾಗ ಹಿಂದಿನ ವರ್ಷದಲ್ಲಿ ನಿಗಮವು ಬಿಡುಗಡೆಮಾಡಿದ ಸಾಲದ 12% ಮೊತ್ತವನ್ನು ವಿದ್ಯಾರ್ಥಿಗಳು ಪಾವತಿಸಬೇಕಾಗುತ್ತದೆ.

3.ಅಲ್ಪಸಂಖ್ಯಾತವರ್ಗಕ್ಕೆ ಸೇರಿದ (ಕುಟುಂಬದ ಆದಾಯ ಮಿತಿ ರೂ. 8.00 ಲಕ್ಷಗಳನ್ನು ಮೀರಬಾರದು) ವಿದ್ಯಾರ್ಥಿಯ ಕುರಿತು ತಹಶೀಲ್ದಾರ್‌ರಿಂದ ಜಾತಿ/ಆದಾಯ ಪ್ರಮಾಣೀಕರಣವನ್ನು ಸಂಸ್ಥೆಗಳು / ಕಾಲೇಜುಗಳು ಖಚಿತಪಡಿಸಿಕೊಳ್ಳಬೇಕು.

4.ವಿದ್ಯಾರ್ಥಿಯ ಕುಟುಂಬದ ಆದಾಯಮಿತಿರೂ. 8.00 ಲಕ್ಷಮೀರಬಾರದು.

5.ವಿದ್ಯಾರ್ಥಿಗಳಿಗೆ ಸಾಲದ ಮೊತ್ತವನ್ನು ನಿಗಮದಿಂದ ನೇರವಾಗಿ ಡಿಬಿಟಿ ಮೂಲಕ ಕಾಲೇಜಿನ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ.

6.ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ನೀಟ್) ಆಯ್ಕೆಯಾದ ಎಂ.ಬಿ.ಬಿ.ಎಸ್, ಎಂ.ಡಿ/ಎಂ.ಎಸ್ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಟ ರೂ.3.00 ಲಕ್ಷದವರೆಗೆ ಸಾಲ ನೀಡಲಾಗುವುದು.

7.ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ನೀಟ್) ಆಯ್ಕೆಯಾದ ಬಿ.ಡಿ.ಎಸ್.ಎಂ.ಡಿ.ಎಸ್ ಕೋರ್ಸ್‌ಗಳಿಗೆ ಗರಿಷ್ಟ ರೂ.1.00 ಲಕ್ಷದವರೆಗೆ, ಹಾಗೂ ಬಿ.ಆಯುಷ್ ಮತ್ತು ಎಂ.ಆಯುಷ್ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಗರಿಷ್ಟ ರೂ.50,000/- ಗಳನ್ನು ಸಾಲವಾಗಿ ನೀಡಲಾಗುವುದು.

8.ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ/ನೀಟ್) ಆಯ್ಕೆಯಾದ ಅಂದರೆ ಬ್ಯಾಚುಲಾರ್ ಆಫ್ ಆರ್ಕಿಟೆಕ್ಟ/ಇಂಜಿನಿಯರಿಂಗ್/ಟೆಕ್ನಾಲಜಿ (ಬಿ.ಇ./ಬಿ.ಟೆಕ್), ಎಂ.ಟೆಕ್, ಎಂ.ಇ. ಬಿ.ಆರ್ಕ್. ಎಂ.ಆರ್ಕ್. ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಟ ರೂ.50,000/-ಗಳು ಸಾಲವಾಗಿ ನೀಡಲಾಗುವುದು.

9.ಅಲ್ಲದೆ ಎಂ.ಬಿ.ಎ, ಎಂ.ಸಿ.ಎ, LLB ಕೋರ್ಸಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಗರಿಷ್ಠ ರೂ.50,000/-ಗಳನ್ನು ಸಾಲವಾಗಿ ನೀಡಲಾಗುವುದು.

**ಅರ್ಹತೆಗಳು**

(ಅ)ವಿದ್ಯಾರ್ಥಿಯು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.

(ಆ)ವಿದ್ಯಾರ್ಥಿಯು ರಾಜ್ಯದ ಖಾಯಂ ನಿವಾಸಿ ಯಾಗಿರಬೇಕು.

(ಇ)ವಿದ್ಯಾರ್ಥಿಯ ವಾರ್ಷಿಕ ಆದಾಯ ರೂ.8.00 ಲಕ್ಷಮೀರಬಾರದು.

**ದಾಖಲೆಗಳು**

1. ವಿದ್ಯಾರ್ಥಿಯ ಆನ್ಲೈನ್ ಅರ್ಜಿ
2. ವಿದ್ಯಾರ್ಥಿಯ ಇತ್ತೀಚಿನ 2 ಪಾಸ್‌ಪೂರ್ಟ್ ಅಳತೆಯ ಭಾವಚಿತ್ರ
3. ವಿದ್ಯಾರ್ಥಿಯ ಜಾತಿ ಮತ್ತುಆದಾಯ ಪ್ರಮಾಣಪತ್ರ
4. ವಿದ್ಯಾರ್ಥಿಯ ಆಧಾರ್ ಕಾರ್ಡ್ ಪ್ರತಿ
5. ವಿದ್ಯಾರ್ಥಿಯ CET ಪ್ರವೇಶ ಆದೇಶದ ಪತ್ರ
6. ವಿದ್ಯಾರ್ಥಿಯ NEET ಪ್ರವೇಶ ಆದೇಶದ ಪತ್ರ
7. ವಿದ್ಯಾರ್ಥಿಯ SSLC/10 ನೇತರಗತಿಯ ಅಂಕಪಟ್ಟಿ
8. ವಿದ್ಯಾರ್ಥಿಯ ಡಿಪ್ಲೋಮ/ಪಿ.ಯು.ಸಿ ಅಂಕಪಟ್ಟಿ
9. ಇಂಡಿಮ್ನಿಟೀ (ನಷ್ಟಪರಿಹಾರ) ಬಾಂಡ್
10. ವಿದ್ಯಾರ್ಥಿಯ ಕಾಲೇಜು ಬ್ಯಾಂಕ್ ವಿವರ
11. ವಿದ್ಯಾರ್ಥಿಯ ಬೋನಾಫೈಡ್/ಸ್ಟಡಿ ಸರ್ಟಿಫಿಕೇಟ್
12. ವಿದ್ಯಾರ್ಥಿಯ ಸ್ವಯಂ ಘೋಷಣೆ ಪತ್ರ
13. ಪೋಷಕರ ಸ್ವಯಂ ಘೋಷಣೆ ಪತ್ರ.
14. College Fee Structure.

## 2022–23ನೇ ಸಾಲಿನ ಪ್ಯಾಸೆಂಜರ್ ಆಟೋರಿಕ್ಷ /ಗೂಡ್ಸ್ ವಾಹನ, ಟ್ಯಾಕ್ಸಿ ವಾಹನ ಖರೀದಿಸಲು ಸಹಾಯಧನ ಯೋಜನೆ

**ಮಾರ್ಗಸೂಚಿಗಳು**

1.ಈ ಯೋಜನೆಯನ್ನು ನಿಗಮದ ವತಿಯಿಂದ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ.

2.ಬ್ಯಾಂಕುಗಳಿಂದ ಸಾಲ ಮಂಜೂರಾತಿ ನೀಡಿದ/ಪಡೆದ ಫಲಾನುಭವಿಗಳಿಗೆ ಆಟೋರಿಕ್ಷಾ / ಗೂಡ್ಸ್ ವಾಹನ /ಟ್ಯಾಕ್ಸಿ ಖರೀದಿಸಲು ವಾಹನದ ಮೌಲ್ಯದ ಶೇ.33 ರಷ್ಟು ಸಹಾಯಧನ ಗರಿಷ್ಠ ರೂ.2.50 ಲಕ್ಷವನ್ನು ನೀಡಲಾಗುವುದು.

3.ಮಹಿಳೆಯರಿಗೆ ಆದ್ಯತೆಯನ್ನು ನೀಡಲಾಗುವುದು.

4.ಈ ಯೋಜನೆಯಡಿ ಖರೀದಿಸಲಾಗಿರುವ ವಾಹನವನ್ನು ಫಲಾನುಭವಿಗಳು ಸಾಲದ ಅವಧಿಯಲ್ಲಿ ಇತರರಿಗೆ ಪರಭಾರೆ ಮಾಡಬಾರದು

5.ಫಲಾನುಭವಿಯು ಈ ವಾಹನದಿಂದ ಲಭ್ಯವಾಗುವ ವಾರ್ಷಿಕ ಆದಾಯದ ವಿವರ, ಖರೀದಿ ಮಾಡಿದ ತಕ್ಷಣ ತೆರಿಗೆಯನ್ನು ಪಾವತಿಸಿರುವ ಮತ್ತು ವಿಮೆಯನ್ನು ಪಾವತಿಸಿರುವ ಬಗ್ಗೆ ವಿವರಗಳನ್ನು ದಾಖಲೆಗಳ ಪ್ರತಿಯೊಂದಿಗೆ ಜಿಲ್ಲಾಕಛೇರಿಗೆ ಮಾಹಿತಿಯನ್ನು ಸಲ್ಲಿಸುವುದು.

6.ಯಾವುದಾದರೂ ವಿಮೆಯನ್ನು Claim ಮಾಡಿದಲ್ಲಿ ಖರೀದಿಸಿದ ವಿವರವನ್ನು ನಿಗಮಕ್ಕೆ ನೀಡತಕ್ಕದ್ದು.

7.ನಿಗಮದ ಸಹಾಯಧನದಿಂದ ಪಡೆದ ವಾಹನ ಮೇಲೆ "KMDCವತಿಯಿಂದ ಸಹಾಯಧನ" ಎಂದು ನಮೂದಿಸತಕ್ಕದ್ದು.

8.ನಿಗಮದಿಂದ ಪಡೆದ ವಾಹನದ ಜೊತೆಯಲ್ಲಿ ಫಲಾನುಭವಿ ಭಾವಚಿತ್ರವನ್ನು ಕಡ್ಡಾಯವಾಗಿ ಜಿಲ್ಲಾ ವ್ಯವಸ್ಥಾಪಕರು ದೃಢೀಕರಿಸಿ ಕಡತದಲ್ಲಿ ಇಡತಕ್ಕದ್ದು.

**ಅರ್ಹತೆಗಳು**

(ಅ) ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.

(ಆ) ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(ಇ) ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.

(ಈ) ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ರೂ.4.50 ಲಕ್ಷ ದೊಳಗಿರಬೇಕು.

(ಉ)ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ/PSU'sಸರ್ಕಾರದ ಉದ್ಯೋಗಿಯಾಗಿರಬಾರದು

(ಊ)ಅರ್ಜಿದಾರರು ಆರ್.ಟಿ.ಓ.ಯಿಂದ ನೀಡಲ್ಪಟ್ಟ ಸಂಬಂಧಪಟ್ಟ ವಾಹನ ಚಾಲನಾ ಪರವಾಗಿಯನ್ನು (License) ಹೊಂದಿರಬೇಕು

(ಋ)ಅರ್ಜಿದಾರರ ಮತ್ತು ಕುಟುಂಬದ ಸದಸ್ಯರು ವಾಹನಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಯಾವುದೇ ಯೋಜನೆಯಡಿ ಸಾಲ ಸೌಲಭ್ಯ ಪಡೆದಿರಬಾರದು.

(ಋ) ಅರ್ಜಿದಾರರು KMDCಯಲ್ಲಿಸುಸ್ತಿದಾರಯಾಗಿರಬಾರದು.

**ದಾಖಲೆಗಳು**

1.ಆನ್‌ಲೈನ್ ಅರ್ಜಿ

2.ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

3.ಜಾತಿ, ಆದಾಯ ಪ್ರಮಾಣ ಪತ್ರ

4.ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್ ಪ್ರತಿ

5.ವಾಹನ ಚಾಲನ ಪರವಾನಿಗೆ ಪ್ರಮಾಣ ಪತ್ರ

6.ಅರ್ಜಿದಾರರ ಮತ್ತು ಕುಟುಂಬದ ಸದಸ್ಯರು ವಾಹನ ಖರೀದಿಗೆ ರಾಜ್ಯ ಸರ್ಕಾರದ ಯಾವುದೇ ಯೋಜನೆಯಡಿ ಸಾಲ ಸೌಲಭ್ಯ ಪಡೆದಿಲ್ಲದಿರುವಬಗ್ಗೆ ಜಿಲ್ಲಾ ವ್ಯವಸ್ಥಾಪಕರಿಂದ ದೃಢೀಕರಣ ಪತ್ರ (Affidavit)

7.ಈ ಯೋಜನೆಯಡಿ ಪಡೆದ ವಾಹನವನ್ನು ಯಾರಿಗೂ ಪರಭಾರೆ ಮಾಡದಿರುವ ಬಗ್ಗೆ ದೃಢೀಕರಣ ಪತ್ರ (Affidavit)

**ಆಯ್ಕೆ ಸಮಿತಿ**

1.ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು- ಅಧ್ಯಕ್ಷರು

2 ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ- ಉಪಾಧ್ಯಕ್ಷರು

3.ಸಂಬಂಧಪಟ್ಟ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು – ಸದಸ್ಯರು

4.ಸಂಬಂಧಪಟ್ಟ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ –ಸದಸ್ಯರು

5.ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ- ಸದಸ್ಯರು

6.ಸಂಬಂಧಪಟ್ಟ ಜಿಲ್ಲೆಯ ಕ.ಅ.ಅ.ನಿಗಮದ ಜಿಲ್ಲಾ ವ್ಯವಸ್ಥಾಪಕರು- ಸದಸ್ಯ ಕಾರ್ಯದರ್ಶಿ

**ಯೋಜನೆಯ ಅನುಷ್ಠಾನದ ವಿವಿಧ ಹಂತಗಳು**

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸತಕ್ಕದ್ದು.
- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು, ಇಲ್ಲಾವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಮಹಿಳೆಯರಿಗೆ ಆದ್ಯತೆ ನೀಡತಕ್ಕದ್ದು
- ಆಯ್ಕೆಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ರಾಷ್ಟ್ರೀಕೃತ /ಷೆಡ್ಯೂಲ್ ಬ್ಯಾಂಕ್‌ಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸತಕ್ಕದ್ದು

- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಬ್ಯಾಂಕಿನ ಸಾಲ ಮಂಜೂರಾತಿ ಪತ್ರದ ಜೊತೆಗೆ ಮತ್ತು ವಾಹನದ ದರಪಟ್ಟಿಯನ್ನು ಅಧಿಕೃತ ಡೀಲರುಗಳಿಂದ ಪಡೆದು ಕಡ್ಡಾಯವಾಗಿ ಆನ್ ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಂಬಂಧಪಟ್ಟ ಜಿಲ್ಲೆಯ ಬ್ಯಾಂಕ್ Parking Acoount / Sundry A/Cಗೆ ಕಳುಹಿಸಿಕೊಡುವುದು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನವನ್ನು ನಿಗಧಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.

## 2022–23ನೇ ಸಾಲಿನ ಸ್ವಯಂ ಉದ್ಯೋಗ ಯೋಜನೆ

### ಸ್ವಯಂ ಉದ್ಯೋಗ ಯೋಜನೆ

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಸಮುದಾಯದ ಜನರಿಗೆ ವ್ಯಾಪಾರ, ಸಣ್ಣ ಪ್ರಮಾಣದ ಗುಡಿ ಕೈಗಾರಿಕೆ, ಸೇವಾ ಕ್ಷೇತ್ರ, ಕೃಷಿ ಆಧಾರಿತ ಚಟುವಟಿಕೆಗಳು ಮುಂತಾದುವುಗಳನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿ ಪಡಿಸಿಕೊಳ್ಳುವ ಸಲುವಾಗಿ ರಾಷ್ಟ್ರೀಕೃತ/ಷೆಡ್ಯೂಲ್ ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗುವುದು. ಘಟಕ ವೆಚ್ಚದ ಶೇ.33 ಅಥವಾ ಗರಿಷ್ಟ ಮಿತಿ ರೂ.1.00 ಲಕ್ಷದ ಸಹಾಯಧನ ನೀಡಲಾಗುವುದು.

**ಅರ್ಹತೆಗಳು**

(ಅ) ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.

(ಆ) ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(ಇ) ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.

(ಈ)ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದಲ್ಲಿ ರೂ.81,000/- ಮತ್ತು ನಗರ ಪ್ರದೇಶದಲ್ಲಿ ರೂ.1,03,000/-ದೊಳಗಿರಬೇಕು.

(ಉ)ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ/PSU'sಸರ್ಕಾರದ ಉದ್ಯೋಗಿಯಾಗಿರಬಾರದು

(ಊ) ಅರ್ಜಿದಾರರು KMDCಯಲ್ಲಿ ಈಗಾಗಲೇ ಸಾಲ ಪಡೆದಿರಬಾರದು.

**ದಾಖಲೆಗಳು**

1.ಆನ್‌ಲೈನ್ ಅರ್ಜಿ

2.ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

3.ಜಾತಿ, ಆದಾಯ ಪ್ರಮಾಣ ಪತ್ರ

4.ಆಧಾರ್ ಕಾರ್ಡ್ ಪ್ರತಿ

5.ಯೋಜನಾ ವರದಿ

**ಆಯ್ಕೆ ಸಮಿತಿ**

1.ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು – ಅಧ್ಯಕ್ಷರು

2.ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು – ಸಹ ಅಧ್ಯಕ್ಷರು
3.ಸಬಂಧಿಸಿದ ತಾಲ್ಲೂಕು ತಹಶೀಲ್ದಾರರು – ಸದಸ್ಯರು
4.ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾಯತ್–ಸದಸ್ಯರು
5.ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ –ಸದಸ್ಯರು
6.ಜಿಲ್ಲಾ ಜಂಟಿ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ–ಸದಸ್ಯರು
7.ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ–ಸದಸ್ಯರು
8.ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ– ಸದಸ್ಯ ಕಾರ್ಯದರ್ಶಿ

**ಯೋಜನೆಯ ಅನುಷ್ಠಾನದ ವಿವಿಧ ಹಂತಗಳು**

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸತಕ್ಕದ್ದು.
- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು, ಇಲ್ಲಾವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಮಹಿಳೆಯರಿಗೆ ಶೇ.33% ಮೀಸಲಾತಿ ನೀಡತಕ್ಕದ್ದು
- ಆಯ್ಕೆಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳ ಅರ್ಜಿಗಳನ್ನು ದಾಖಲೆಗಳೊಂದಿಗೆ ಜಿಲ್ಲಾ ವ್ಯವಸ್ಥಾಪಕರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ರಾಷ್ಟ್ರೀಕೃತ /ಷೆಡ್ಯೂಲ್ ಬ್ಯಾಂಕ್‌ಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸತಕ್ಕದ್ದು
- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಬ್ಯಾಂಕಿನ ಸಾಲ ಮಂಜೂರಾತಿ ಪತ್ರದ ಜೊತೆಗೆ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಆನ್ ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಂಬಂಧಪಟ್ಟ ಜಿಲ್ಲೆಯ ಬ್ಯಾಂಕ್ Parking Acoount / Sundry A/Cಗೆ ಕಳುಹಿಸಿಕೊಡುವುದು.
- ನಿಗಮದಿಂದ ಬಿಡುಗಡೆ ಮಾಡಲಾದ ಸಹಾಯಧನವನ್ನು ನಿಗಧಿತ ಉದ್ದೇಶಕ್ಕೆ ವಿನಿಯೋಗಿಸಿರುವ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಂದ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.
- ಸಾಲವನ್ನು ಮಂಜೂರು ಮಾಡದಿದ್ದಲ್ಲಿ, ಸಕಾರಣಗಳೊಂದಿಗೆ ಸಹಾಯಧನ ಮೊತ್ತವನ್ನು ಕೇಂದ್ರ ಕಚೇರಿಗೆ ಹಿಂದಿರುಗಿಸಬೇಕು

## 2022-23ನೇ ಸಾಲಿನ 'ಶ್ರಮಶಕ್ತಿ' ಯೋಜನೆ

ಈ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತ ವರ್ಗದ ಕುಲಕಸುಬುದಾರರಿಗೆ ತರಬೇತಿ ನೀಡಿ, ಅವರು ತಮ್ಮ ಕಲಾತ್ಮಕ ಮತ್ತು ತಾಂತ್ರಿಕ ಕೌಶಲ್ಯವನ್ನು ವೃದ್ಧಿಸಿಕೊಂಡು ಅದೇ ಕಸುಬನ್ನು ಮುಂದುವರೆಸಲು ಅಥವಾ ಸಣ್ಣ ವ್ಯಾಪಾರವನ್ನು ಪ್ರಾರಂಭಿಸಲು ಅಥವಾ ಅಭಿವೃದ್ಧಿಗೊಳಿಸುವ ಸಲುವಾಗಿ, ನಿಗಮದಿಂದ ಕಡಿಮೆ ಬಡ್ಡಿದರದಲ್ಲಿ ರೂ.50,000/- ಸಾಲಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಇದರಲ್ಲಿ, ಶೇ.50ರಷ್ಟು ಸಾಲವನ್ನು 36 ತಿಂಗಳಿನಲ್ಲಿ ಫಲಾನುಭವಿಯು ಮರುಪಾವತಿ ಮಾಡಿದಲ್ಲಿ, ಉಳಿದ ಶೇ.50ರಷ್ಟು ಹಣವನ್ನು 'ಬ್ಯಾಕ್‌ಎಂಡ್ ಸಹಾಯಧನ'ವನ್ನಾಗಿ ಪರಿಗಣಿಸಲಾಗುತ್ತದೆ.ಫಲಾನುಭವಿಯು ತಾನು ಪಡೆದ ಸಾಲವನ್ನು 36 ತಿಂಗಳೊಳಗಾಗಿ ಮರುಪಾವತಿ ಮಾಡಲು ವಿಫಲನಾದಲ್ಲಿ, ಶೇ.50ರಷ್ಟು ಬ್ಯಾಕ್‌ಎಂಡ್ ಸಹಾಯಧನವನ್ನು ಸಹ ಸಾಲವೆಂದು ಪರಿಗಣಿಸಲಾಗುತ್ತದೆ.

**ಅರ್ಹತೆಗಳು**

(ಅ) ಅರ್ಜಿದಾರರು ರಾಜ್ಯದ ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರಬೇಕು.

(ಆ) ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

(ಇ) ಅರ್ಜಿದಾರರ ವಯೋಮಿತಿ 18 ರಿಂದ 55 ವರ್ಷಗಳು.

(ಈ)ಎಲ್ಲಾ ಮೂಲಗಳಿಂದ ಕೌಟುಂಬಿಕ ವಾರ್ಷಿಕ ಆದಾಯ ರೂ.3.50 ಲಕ್ಷ ದೊಳಗಿರಬೇಕು

(ಉ)ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ರಾಜ್ಯ/ಕೇಂದ್ರ/PSU'sಸರ್ಕಾರದ ಉದ್ಯೋಗಿಯಾಗಿರಬಾರದು

(ಊ) ಅರ್ಜಿದಾರರು KMDCಯಲ್ಲಿಸುಸ್ತಿದಾರಯಾಗಿರಬಾರದು.

**ದಾಖಲೆಗಳು**

1.ಆನ್‌ಲೈನ್ ಅರ್ಜಿ

2.ಫಲಾನುಭವಿಯ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

3.ಜಾತಿ, ಆದಾಯ ಪ್ರಮಾಣ ಪತ್ರ

4.ಪಡಿತರ ಚೀಟಿ/ಮತದಾರರ ಚೀಟಿ/ಆಧಾರ್ ಕಾರ್ಡ್ ಪ್ರತಿ

5.ಯೋಜನಾ ವರದಿ

**ಆಯ್ಕೆ ಸಮಿತಿ**

1.ಆಯಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರು - ಅಧ್ಯಕ್ಷರು

2.ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು - ಸಹ ಅಧ್ಯಕ್ಷರು

3.ಸಬಂಧಿಸಿದ ತಾಲ್ಲೂಕು ತಹಶೀಲ್ದಾರರು - ಸದಸ್ಯರು

4.ಕಾರ್ಯನಿರ್ವಾಹಣಾಧಿಕಾರಿ ತಾಲ್ಲೂಕು ಪಂಚಾಯತ್-ಸದಸ್ಯರು

5.ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ -ಸದಸ್ಯರು

6.ಜಿಲ್ಲಾ ಜಂಟಿ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆ-ಸದಸ್ಯರು

7.ಜಿಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ-ಸದಸ್ಯರು

8.ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ- ಸದಸ್ಯ ಕಾರ್ಯದರ್ಶಿ

## ಯೋಜನೆಯ ಅನುಷ್ಠಾನದ ವಿವಿಧ ಹಂತಗಳು

- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಿಂದ ಪ್ರಚಲಿತ ವಿದ್ಯುನ್ಮಾನ ಪತ್ರಿಕೆಗಳಲ್ಲಿ ನಿಗಧಿತ ಕಾಲಮಿತಿಯೊಳಗೆ ಅರ್ಹ ಫಲಾನುಭವಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸತಕ್ಕದ್ದು.
- ಅರ್ಹ ಫಲಾನುಭವಿಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಮತ್ತು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅರ್ಜಿಗಳನ್ನು ಆಯ್ಕೆ ಸಮಿತಿಗೆ ಮಂಡಿಸಲಾಗುವುದಿಲ್ಲ.
- ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು, ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಪರಿಶೀಲಿಸಿ ವೇಳಾ ಪಟ್ಟಿ ಪ್ರಕಾರ ಆಯ್ಕೆ ಸಮಿತಿಯ ಮುಂದೆ ಮಂಡಿಸತಕ್ಕದ್ದು.
- ಮಹಿಳೆಯರಿಗೆ ಶೇ.33% ನೀಡತಕ್ಕದ್ದು
- ಜಿಲ್ಲೆಗೆ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಆನ್ ಲೈನ್ ಮುಖಾಂತರ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಕೇಂದ್ರ ಕಛೇರಿಯಿಂದ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಿಂದ ಆನ್‌ಲೈನ್ ಮೂಲಕ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಸಹಾಯಧನವನ್ನು ಸಂಬಂಧಪಟ್ಟ ಫಲಾನುಭವಿಯ ಬ್ಯಾಂಕ್ ಖಾತೆಗೆ ಕಳುಹಿಸಿಕೊಡುವುದು.
- ನಿಗಮದಿಂದ ಬಿಡುಗಡೆ ಮಾಡಲಾದ ಸಾಲ ಸಹಾಯಧನವನ್ನು ನಿಗಧಿತ ಉದ್ದೇಶಕ್ಕೆ ವಿನಿಯೋಗಿಸಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ಸಹಾಯಧನ ವಿನಿಯೋಗ ಪ್ರಮಾಣ ಪತ್ರ ಪಡೆಯುವುದು.

**ತಮ್ಮ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನೇರವಾಗಿ ತಾವೇ ಜನ ಸಂಖ್ಯೆ 2011ರ ಪ್ರಕಾರ ಹಂಚಿಕೆ ಮಾಡಿ** ಎಲ್ಲಾ ಯೋಜನೆಗಳನ್ನು ಜಿಲ್ಲೆಯ ಎಲ್ಲಾ ಕ್ಷೇತ್ರದ ಮಾನ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್ ಶಾಸಕರಲ್ಲಿ ಮಾಹಿತಿಯನ್ನು ಸಲ್ಲಿಸಿ ದಿನ ಪತ್ರಿಕೆಗಳಲ್ಲಿ/ಮಸೀದಿ/ ಚರ್ಚ್/ಹಾಗೂ ಇತರೆ ಪ್ರಾರ್ಥನ ಸ್ಥಳಗಳಲ್ಲಿ, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಅಧೀನದಲ್ಲಿ ಬರುವ ತಾಲ್ಲೂಕುವಾರು ಮಾಹಿತಿ ಕೇಂದ್ರಗಳಲ್ಲಿ ಪ್ರಚಾರಪಡಿಸಿ 15ನೇ ಜುಲೈ'2022 ನಿಗಧಿತ ದಿನಾಂಕದೊಳಗೆ ಅರ್ಜಿಯನ್ನು ಅಹ್ವಾನಿಸಲು ಹಾಗೂ ಸಿದ್ಧಪಡಿಸಿದ ಯೋಜನವಾರು ಪ್ರಸ್ತಾವನೆಗಳನ್ನು ಆಯ್ಕೆ ಸಮಿತಿಯಲ್ಲಿ ಮಂಡಿಸಿ ಆಯ್ಕೆಮಾಡಿ ಅಂತಿಮವಾಗಿ ಅಕ್ಟೋಬರ್'15 2022ರೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಅರ್ಜಿ ಸಲ್ಲಿಸಲು ಈ ಜಾಲತಾಣವನ್ನು ಸಂಪರ್ಕಿಸಿ:

www.kmdconline.karnataka.gov.in

ಹೆಚ್ಚಿನ ಮಾಹಿತಿಗಾಗಿ ಸಹಾಯ ವಾಣಿಯನ್ನು ಸಂಪರ್ಕಿಸಿ: 8277799990

ವ್ಯವಸ್ಥಾಪಕ ನಿರ್ದೇಶಕರು